# ಫ್ಯಾನ್ಸಿ ಕಿವಿಯೋಲೆ



ಫ್ಯಾನ್ಸಿ ಕಿವಿಯೋಲೆ ಇಂದಿನ ಮಹಿಳೆಯರ ಮೆಚ್ಚು. ವಜ್ರ, ಚಿನ್ನದ ಎಷ್ಟೇ ಒಡವೆಗಳಿದ್ದರೂ ಉಡುಪಿಗೆ ಮ್ಯಾಚಿಂಗ್ ಮಾಡಿಕೊಳ್ಳಲು ಯುವತಿಯರು ಮೊರೆಹೋಗುವುದು ಈ ಫ್ಯಾನ್ಸಿ ಕಿವಿಯೋಲೆಗಳನ್ನೇ.

■ ಸುಹಾನಿ ಬಡೆಕ್ಕಿಲ

ಮೂಗಿನಂದಕ್ಕೆ ಮೂಗುತಿ, ಕೈ ಅಂದಕ್ಕೆ ಬಳೆ ಹಾಗೆಯೇ ಕಿವಿಯ ಅಂದಕ್ಕೆ ಕಿವಿಯೋಲೆ. ಕಿವಿಯೋಲೆಗಳು ಚಿನ್ನ, ಬೆಳ್ಳಿ, ವಜ್ರಕ್ಕಿಂತಲೂ ಫ್ಯಾನ್ಸಿ ಕಿವಿಯೋಲೆಗಳೇ ಇಂದಿನ ಫ್ಯಾಷನ್ ಟ್ರೆಂಡ್. ಹೆಣ್ಣು ಎಷ್ಟೇ ಸುಂದರವಾಗಿದ್ದರೂ ಅವಳ ಸೌಂದರ್ಯ ಎದ್ದು ಕಾಣಲು ತಕ್ಕಮಟ್ಟಿಗಿನ ಅಲಂಕಾರ ಮಾಡಿಕೊಳ್ಳಲೇಬೇಕು. ಆದರೆ ಇಂದು ಕಣ್ಣು ಮಿಟುಕಿಸುವಷ್ಟರಲ್ಲಿ ಫ್ಯಾಷನ್ ಲೋಕ ಬದಲಾಗುತ್ತದೆ.

ಕಿವಿಯೋಲೆಯೆಂದರೆ ಯಾರಿಗೆ ಇಷ್ಟವಿಲ್ಲ ? ಪ್ರತಿ ಹೆಣ್ಮಕ್ಕಳಿಗೂ ಇಷ್ಟ. ಪುಟ್ಟ ಬಾಲೆಯಿಂದ ಹಿಡಿದು ಮುದುಕಿಯರವರೆಗೂ ಕಿವಿಯೋಲೆಗಳು ನಾನಾ ವೈವಿಧ್ಯಗಳಲ್ಲಿ ಲಭ್ಯ. ಹಿಂದಿನ ಕಾಲದಲ್ಲಾದರೆ ಮಾಟಿಯಂತಹ ದೊಡ್ಡ ದೊಡ್ಡ ಲೋಲಾಕುಗಳನ್ನು ಧರಿಸಿ ತಮ್ಮ ಸೌಂದರ್ಯವನ್ನು ಮತ್ತಷ್ಟು ಇಮ್ಮಡಿಗೊಳಿಸುತ್ತಿದ್ದರು. ಆಗೆಲ್ಲ ಬೆಂಡೋಲೆ, ಝುಮುಕಿ, ಲೋಲಾಕುಗಳಿಗೆ ಹೆಚ್ಚು ಪ್ರಾಧಾನ್ಯತೆ ಇತ್ತು. ಮದುಮಗಳಿಗಂತೂ ಝುಮುಕಿಯಿಲ್ಲದೆ ಅಲಂಕಾರ ಪೂರ್ಣಗೊಳ್ಳುವುದಿಲ್ಲ.

ಕಿವಿಯೋಲೆಗಳು ಸಾಕಷ್ಟು ರೀತಿಯಲ್ಲಿ ಬದಲಾವಣೆಗಳಾಗಿವೆ. ಎಲ್ಲರೂ ಚಿನ್ನದ ಝುಮುಕಿ ಇಷ್ಟಪಡುವವರಾದರೂ ಇಂದಿನ ಫ್ಯಾಷನ್‌ಗೆ, ಉಡುಪಿಗೆ ಮ್ಯಾಚ್ ಆಗುವುದಿಲ್ಲವೆಂದು ಅದನ್ನು ಅಷ್ಟಾಗಿ ಧರಿಸಲು ಇಷ್ಟ ಪಡುವುದಿಲ್ಲ. ಬದಲಾಗಿ ಮಾರುಕಟ್ಟೆಯಲ್ಲಿ ದೊರೆಯುವ ನಾನಾ ರೀತಿಯ ಆರ್ಟಿಫೀಶಿಯಲ್ ಕಿವಿಯೋಲೆಗಳು ಇಂದು ಮಹಿಳೆಯರ ಮನಸ್ಸನ್ನಾಕರ್ಷಿಸಿವೆ. ಇದೇ ಓಲೆಗಳು ಮಾರುಕಟ್ಟೆಯನ್ನೂ ಆಳುತ್ತಿವೆ. ಸ್ಟಡ್ಸ್, ಹ್ಯಾಂಗಿಂಗ್ಸ್, ಝುಮ್ಕಾ.. ಹೀಗೆ ಹಲವಾರು ವೈವಿಧ್ಯತೆ ಇದೆ. ಇನ್ನು ಚಿನ್ನದಂತೆ ಕಿವಿಯೋಲೆ ಕಂಡರೂ ಅದು ಚಿನ್ನವಲ್ಲ, ಬದಲಾಗಿ ಅದಕ್ಕೆ ಕೋಟಿಂಗ್ ಕೊಟ್ಟಿರುತ್ತಾರೆ. ವನ್ ಗ್ರಾಮ್ ಗೋಲ್ಡ್ ಒಡವೆಯೂ ಇಂದು ಹೆಚ್ಚು ಪ್ರಚಲಿತದಲ್ಲಿದೆ.

ಇನ್ನು ಕಾಲೇಜು ಕನ್ಯೆಯರಂತೂ ಫ್ಯಾನ್ಸಿ ಸ್ಟೋರ್‌ಗೆ ಕಾಲಿಟ್ಟರೆ ಕೇಳಬೇಕಿಲ್ಲ. ಅವರದ್ದೇ ಸಾಮ್ರಾಜ್ಯ. ನಾನಾ ರೀತಿಯ ಕಿವಿಯೋಲೆ ಕಂಡು ಇಷ್ಟವಾದರೂ ಕೊನೆಗೆ ಖರೀದಿಸುವುದು ದೊಡ್ಡ ದೊಡ್ಡ ಹ್ಯಾಂಗಿಂಗ್ಸ್ ಇರುವ ಕಿವಿಯೋಲೆಯನ್ನು.



ಇನ್ನು ಕೆಲವು ಕಾಲೇಜು ಯುವತಿಯರಿಗೆ ಸ್ಟಡ್ಸ್ ಸೂಟ್ ಆಗುತ್ತದೆ. ದಿನಕ್ಕೊಂದು ಸ್ಟಡ್ಸ್ ಬದಲಾಯಿಸಿ ಕಾಲೇಜು ಹೋಗುವವರು ಅದೆಷ್ಟು ಮಂದಿಯೋ?. ಸ್ಟಡ್ಸ್ ತುಂಬಾ ಕಡಿಮೆ ಬೆಲೆಯಲ್ಲಿ ಸಿಗುತ್ತವೆ. ಈಗ ಪೇಪರ್ ಕ್ರಾಫ್ಟ್ ಕಿವಿಯೋಲೆಗಳು ಲೇಟೆಸ್ಟ್ ಫ್ಯಾಶನ್. ಪೇಪರ್ ಕ್ರಾಫ್ಟ್ ಕಿವಿಯೋಲೆಗಳು ತುಂಬಾ ಅಗ್ಗ ಹಾಗೂ ಹಗುರವಾದದ್ದು. ಇದು ಎಲ್ಲರ ಕಣ್ಮನವನ್ನು ಸೆಳೆಯುತ್ತಿದೆ. ವಿವಿಧ ಡಿಸೈನ್ ಗಳಲ್ಲಿಯೂ ದೊರೆಯುತ್ತವೆ.

ಆದರೆ ಆರ್ಟಿಫೀಶಿಯಲ್ ಝುಮುಕಿಗಳ ಬೇಡಿಕೆ ಮಾತ್ರ ಕಡಿಮೆಯಾಗಿಲ್ಲ. ಅಲ್ಲದೆ ಇದರ ಬೆಲೆಯೂ ಕೊಂಚ ದುಬಾರಿ. ಬಣ್ಣ ಬಣ್ಣದ ಹರಳುಗಳಿಂದ ಪೋಣಿಸಿದ ಕಿವಿಯೋಲೆ ಯುವತಿಯರಿಗೆ ಪ್ಲೆಸೆಂಟ್ ಲುಕ್ ಕೊಡುತ್ತದೆ. ಈ ಝುಮುಕಿ ಬಾಲಿವುಡ್ ಸೆಲೆಬ್ರೆಟಿಗಳನ್ನೂ ಬಿಟ್ಟಿಲ್ಲ. ದೊಡ್ಡ ದೊಡ್ಡ ಝುಮುಕಿ ಧರಿಸಿ ಪಾರ್ಟಿ ಸಮಾರಂಭಗಳಿಗೆ ಹೋಗುತ್ತಾರೆ. ಅವರು ಧರಿಸಿದ ಉಡುಪು ಆಭರಣಗಳೇ ಫ್ಯಾಷನ್ ಆಗಿ ಮಾರುಕಟ್ಟೆಗೆ ಬರುತ್ತದೆ. ಈ ವಿದ್ಯಮಾನ ಇಂದು ನಿನ್ನೆಯದಲ್ಲ.

ಝುಮುಕಿ ಸೀರೆಗೆ ಸರಿಯಾಗಿ ಮ್ಯಾಚ್ ಆಗುತ್ತದೆ. ಅದನ್ನು ಧರಿಸಿ ಅಲುಗಾಡಿಸಿ ನಡೆದಾಡುವ ಪರಿಯೇ ಬೇರೆ. ರೇಷ್ಮೆ ಸೀರೆ ಉಟ್ಟಾಗ ದೊಡ್ಡದಾದ ಕಿವಿಯೋಲೆಯಲ್ಲಿ ರಿಂಗ್ ಆಕೃತಿಯಿರುವ ಕಿವಿಯೋಲೆ ಧರಿಸಿದರೆ ಇನ್ನೂ ಆಕರ್ಷಕವಾಗಿ ಕಾಣಬಹುದು. ಭರತನಾಟ್ಯ, ಕಥಕ್ಕಳಿ, ಕೂಚುಪುಡಿಯಂತಹ ಯಾವುದೇ ನೃತ್ಯವಾಗಿರಲಿ ದೊಡ್ಡ ಝುಮುಕಿ ಧರಿಸಿ ಅವರ ಅಂದವನ್ನು ಹೆಚ್ಚಿಸುತ್ತಾರೆ. ಝುಮುಕಿ ವಿಷಯದಲ್ಲಿ ಹಳೆಯ ಫ್ಯಾಶನ್ ಮತ್ತೆ ಮರುಕಳಿಸಿದೆ ಎಂದೇ ಹೇಳಬೇಕು.

ಇನ್ನು ಹ್ಯಾಂಗಿಂಗ್ಸ್ ಕಿವಿಯೋಲೆಗಳು ಚೂಡಿದಾರ್‌ನಂತಹ ಉಡುಪುಗಳಿಗೆ ಗ್ರ್ಯಾಂಡ್ ಲುಕ್ ನೀಡುತ್ತದೆ. ಈಗಿನ ವಿವಾಹಿತ ಮಹಿಳೆಯರು ಕೂಡ ಇಂತಹ ಫ್ಯಾನ್ಸಿ ಕಿವಿಯೋಲೆಯನ್ನು ಧರಿಸಲು ಶುರು ಮಾಡಿದ್ದಾರೆ. ಬಾಲಕಿಯರು, ಕಾಲೇಜು ಯುವತಿಯರು, ಮಹಿಳೆಯರು.. ಹೀಗೆ ಇಡೀ ಮಹಿಳಾ ಪಡೆಯೇ ಈಗ ಫ್ಯಾನ್ಸಿ ಕಿವಿಯೋಲೆಯ ಹಿಂದೆ ಬಿದ್ದಿದೆ. ಅಲ್ಲದೆ ಎಲ್ಲರ ಮನವನ್ನೂ ಕದ್ದು ಬಿಟ್ಟಿದೆ. ■